
'ನೇತ್ಯಾತ್ಮಕ ಮುಖ' ಎಂದು ಹೆಸರಿಸಬಹುದು. ಹೀಗೆ ಹೆಸರಿಸುತ್ತಿರುವುದು ಆದರ್ಶವಿನಯದ ಇನ್ನೊಂದು ಮುಖವನ್ನು ವಿವರಿಸುವ ಸೌಲಭ್ಯಕ್ಕಾಗಿಯೇ ಹೊರತು ಹಾಗೆ ಹೆಸರಿಸುತ್ತಿರುವುದರಲ್ಲಿ ನನಗೆ ಅಷ್ಟೇನೂ ತೃಪ್ತಿಯಾಗುತ್ತಿಲ್ಲ. ಸೃಜನಕ್ರಿಯೆಯ ಸಂದರ್ಭದಲ್ಲಿ ಪ್ರಕಟವಾಗುವ ಈ ವಿನಯದಲ್ಲಿ ಹೊರಗಿನ ಉಪಾಧಿಗಳನ್ನು ಕಳೆದುಕೊಳ್ಳುವ ಅಂಶ ಪ್ರಬಲವಾಗಿರುವುದರಿಂದ ಸದ್ಯಕ್ಕೆ ಅದನ್ನು 'ನೇತ್ಯಾತ್ಮಕ ಮುಖ' ಎಂದು ಹೆಸರಿಸುತ್ತಿದ್ದೇನೆ.

ಸೃಜನಪ್ರಕ್ರಿಯೆಯಜೊತೆಜೊತೆಯಲ್ಲಿಯೇ ಬೋಧೆಯಾಗುತ್ತಾ ಬಂದು ಸೃಜನಕ್ರಿಯೆ ಮುಗಿದ ಅನಂತರ ಸ್ಪಷ್ಟವಾಗುವ, ಆ ಕಾರಣದಿಂದ ಪ್ರಕಟವಾಗುವ ವಿನಯಕ್ಕೆ 'ಇತ್ಯಾತ್ಮಕ'ವಾದ ಇನ್ನೊಂದು ಮುಖವಿದೆ. ಅನಂತಕಾಲದ, ಅಸಂಖ್ಯಾತ ಮಾನವ ಕೋಟಿಯ ವೈವಿಧ್ಯ ಪೂರ್ಣವಾದ ಅನುಭವಕ್ಕೆ ವಸ್ತುವಾಗಿ ತೆರೆದುಕೊಂಡಿರುವ ಈ ಆದಿ ಅಂತ್ಯವಿಲ್ಲದ ಜೀವನಪ್ರವಾಹ ತನ್ನೊಬ್ಬನ ಮನಸ್ಸಿನಲ್ಲಿ ಅಂಕಿಸಿದ ಅನುಭವ ಸತ್ಯವೇ ಪರಿಪೂರ್ಣವಾದದ್ದಾಗಿರಲಾರದು, ಅದು ಸಾಪೇಕ್ಷಸತ್ಯವೇ ಆಗಿದ್ದೀತು ಎಂಬ ಅರಿವಿನಿಂದ ಬರುವ ವಿನಯ ಆದು. ಆ ವಿನಯಕ್ಕೆ ಹೊಂದಿಕೊಂಡೇ ಆವಳಿಯಂತೆ ಜೊತೆಜೊತೆಯಲ್ಲೇ ಪ್ರಕಟವಾಗಬಹುದಾದ ವಿನಯವೂ ಇದೆ. ತನ್ನ ಅಭಿವ್ಯಕ್ತಿ ಸಾಮರ್ಥ್ಯದ ಮಿತಿಯ ಅರಿವಿನಿಂದ ಮತ್ತು ಅದಕ್ಕಿಂತ ಹೆಚ್ಚಾಗಿ, ಇರುವ ಭಾಷೆಯನ್ನೇ ಅದರೆಲ್ಲ ಸಾಧ್ಯತೆಗಳಲ್ಲಿ ದುಡಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ತನ್ನಲ್ಲೇ ಇದ್ದಿರಬಹುದಾದ ಮಿತಿಯ ಅರಿವಿನಿಂದ ಸಾಹಿತಿಗೆ ಬರುವ ವಿನಯ ಅದು. ಈಗ ವಿವರಿಸಿದಂಥ ವಿನಯದ 'ನೇತ್ಯಾತ್ಮಕ ಮುಖ' ಮತ್ತು ಇತ್ಯಾತ್ಮಕ ಮುಖ'ಗಳು ಆದರ್ಶಪ್ರಾಯವೆಂಬಂತೆ ಪ್ರಕಟವಾಗುವ ಬಗೆಯೇ 'ಸಾಹಿತ್ಯದಲ್ಲಿ ವಿನಯ' ಎನ್ನಬಹುದು. ಸಾಹಿತ್ಯದಲ್ಲಿ ವಿನಯದ ನೇತ್ಯಾತ್ಮಕ ಮುಖವೊಂದೇ ಪ್ರಕಟವಾಗಿ ಇತ್ಯಾತ್ಮಕ ಮುಖ ಪ್ರಕಟವಾಗದಿದ್ದಲ್ಲಿ ಸಾಹಿತಿ, 'ತನ್ನ ಕೃತಿ ಪರಿಪೂರ್ಣವಾದದು. ಪ್ರಶ್ನಾತೀತವಾದದ್ದು' ಎಂಬ ಭ್ರಮೆಗೆ ಒಳಗಾಗುತ್ತಾನೆ. ಆದ್ದರಿಂದ ತನ್ನ ಕೃತಿಯನ್ನು ಕುರಿತಂಥ ವಿಮರ್ಶೆಯನ್ನು ಆತ ತೆರೆದ ಮನಸ್ಸಿನಿಂದ ಅರ್ಥಮಾಡಿಕೊಳ್ಳಲಾರ. ವಿಮರ್ಶಕನ ಅಸ್ತಿತ್ವವನ್ನೇ ಸಹಿಸಲಾರ, ಅಂದರೆ, ವಿನಯದ 'ಇತ್ಯಾತ್ಮಕ ಮುಖ'ದ ಅರಿವಿರದ ಸಾಹಿತಿ ಸಮಾಜ ತನ್ನ ವಿಷಯದಲ್ಲಿ ಏನನ್ನು ಮಾಡಬಾರದೆಂದು ಅಪೇಕ್ಷಿಸಿದ್ದಾನೋ, ಅದನ್ನೇ ತಾನು ವಿಮರ್ಶಕನ ವಿಷಯದಲ್ಲಿ ಮಾಡುವ ವಿಪರ್ಯಾಸದ ವ್ಯಕ್ತಿಯಾಗುತ್ತಾನೆ.



ಆದರ್ಶ ವಿಮರ್ಶಕನೂ ಸೃಜನಶೀಲ ಸಾಹಿತಿಯ ಸಂದರ್ಭದಲ್ಲಿ ವಿವರಿಸಿದಂಥ ಎಲ್ಲ ಉಪಾಧಿಗಳಿಂದಲೂ ಮುಕ್ತನಾಗಿ ತನ್ನ ಅಧ್ಯಯನಕ್ಕೆ ವಿಷಯವಾದ ಕೃತಿಯಲ್ಲಿ ತನ್ನ ಮನಸ್ಸನ್ನು ಕೇಂದ್ರೀಕರಿಸುತ್ತಾನೆ. ಆ ಕೃತಿ ತನ್ನ ಮನಸ್ಸಿನ ಮೇಲೆ ಮಾಡಿದ ಪರಿಣಾಮವನ್ನು, ಅದರ ಮೌಲ್ಯ ನಿರ್ಣಯವನ್ನು ಕುರಿತಂತೆ ತನ್ನ ಜೀವನಾನುಭವ ಮತ್ತು ಬದುಕನ್ನು ಕುರಿತ ತನ್ನ ತಿಳಿವಳಿಕೆಯ ಸಂದರ್ಭದಲ್ಲಿ ವಿವೇಚಿಸುತ್ತಾನೆ. ವಿಮರ್ಶೆಯ ಈ ಪ್ರಕ್ರಿಯೆಯಲ್ಲಿಯೂ ಪ್ರಕಟವಾಗುವ ವಿನಯಕ್ಕೆ ನೇತ್ಯಾತ್ಮಕ ಮತ್ತು ಪ್ರಕಟವಾಗಿ ಇತ್ಯಾತ್ಮಕ ಮುಖಗಳಿರುತ್ತವೆ. ವಿಮರ್ಶಕನಲ್ಲಿ ವಿನಯದ ನೇತ್ಯಾತ್ಮಕ ಮುಖಮಾತ್ರ ಪ್ರಕಟವಾಗಿ ಇತ್ಯಾತ್ಮಕ ಮುಖ ಪ್ರಕಟವಾಗದಿದ್ದಾಗ ಆತ ಬೇರೊಬ್ಬ ವಿಮರ್ಶಕನ ವಿಮರ್ಶೆಯನ್ನು ಬಹಿಷ್ಕರಿಸುವಂತೆ ಶಿಫಾರಸು ಮಾಡಲು ಹೊರಡುತ್ತಾನೆ. ಆದ ಸಾಹಿತ್ಯದಲ್ಲಿ ವಿನಯವಲ್ಲ, ಅವಿನಯ.

ಸೃಜನಶೀಲ ಸಾಹಿತಿ ಮತ್ತು ವಿಮರ್ಶಕರಲ್ಲಿ ಪ್ರಕಟವಾಗಬೇಕಾಗಿರುವ, ಈವರೆಗೆ ವಿವರಿಸಿದಂಥ ವಿನಯವನ್ನು ಅರ್ಥಮಾಡಿಕೊಳ್ಳುವ ಮನಸ್ಸಿನ ಪಕ್ವತೆ ಯಾವ ಸಮಾಜದಲ್ಲಿ ಪ್ರಕಟವಾಗುವುದಿಲ್ಲವೋ ಆ ಸಮಾಜ ಸಾಂಸ್ಕೃತಿಕವಾಗಿ, ಸಾಹಿತ್ಯಿಕವಾಗಿ ಮಹತ್ತಾದುದನ್ನು ಸಾಧಿಸುವ ಚೈತನ್ಯವನ್ನೇ ಕಳೆದುಕೊಂಡಿರುವಂಥದಾಗಿರುತ್ತದೆ.

**1975ರಮಾರ್ಚ್ 16ರಂದು ಮೈಸೂರು ಆಕಾಶವಾಣಿಯಲ್ಲಿ ಮಾಡಿದ ಭಾಷಣದ ಲಿಖಿತ ರೂಪ**